■ ಹನಿ

## ಫಣೀಶ್ 'ಔಟ್'

'ಇತಿಹಾಸ ಮರುಕಳಿಸುವುದಿಲ್ಲ' ಎನ್ನುವ ಮಾತೊಂದಿದೆ. ಆದರೆ ಫಣೀಶ್ ಮೂರ್ತಿ ಇದಕ್ಕೆ ಅಪವಾದ. ಐಗೇಟ್ ಎಂಬ ದೈತ್ಯ ಸಾಫ್ಟ್‌ವೇರ್ ಕಂಪೆನಿಯ ಅಧ್ಯಕ್ಷ ಮತ್ತು ಸಿಇಒ ಆಗಿದ್ದ ಫಣೀಶ್, ಇದೀಗ ಎರಡನೇ ಬಾರಿ, ಹೆಣ್ಣೊಬ್ಬಳ ಶೀಲಹರಣದ ಪ್ರಕರಣದಲ್ಲಿ ಸಿಕ್ಕುಬಿದ್ದು ಕೆಲಸ ಕಳೆದುಕೊಂಡಿದ್ದಾರೆ. 'ತನ್ನ ಸೆಕ್ರೆಟರಿಯಾಗಿದ್ದ ಅರಾಸೆಲಿ ರೋಯಿಬ್ ಜತೆ ಫಣೀಶ್ ಮೂರ್ತಿಗೆ ಲೈಂಗಿಕ ಸಂಬಂಧ ಇತ್ತು. ಇದನ್ನು ಮುಚ್ಚಿಟ್ಟದ್ದು ಕಂಪೆನಿಯ ನಿಯಮದ ಉಲ್ಲಂಘನೆ. ಹಾಗಾಗಿ ಅವರನ್ನು ಕೆಲಸದಿಂದ ಕಿತ್ತು ಹಾಕಲಾಗಿದೆ' ಎಂದು ಕಂಪೆನಿ ಪ್ರಕಟಿಸಿದೆ. ಇನ್ನೊಂದೆಡೆ ಅರಾಸೆಲಿಯೂ ಫಣೀಶ್ ವಿರುದ್ಧ ಮೊಕದ್ದಮೆ ಹೂಡಿದ್ದು, 'ಫಣೀಶ್ ವಿಪರೀತ ಮಾನಸಿಕ ಒತ್ತಡ ಹೇರಿ ನನ್ನ ಲೈಂಗಿಕ ಸಂಪರ್ಕ ಬೆಳೆಸಿದ್ದಾರೆ. ಸಂಬಂಧ ಕಡಿದುಕೊಳ್ಳಲು ಯತ್ನಿಸಿದಾಗ ಭತ್ಯೆ ಕಡಿತ ಮಾಡಿ ಬೆದರಿಸಿದ್ದಾರೆ. ಕೊನೆಗೆ ಆತನ ಮಗುವಿಗೆ ಗರ್ಭಿಣಿಯಾದಾಗ ಒತ್ತಡ ಹೇರಿ ಕೆಲಸಕ್ಕೆ ರಾಜೀನಾಮೆ ಕೊಡಿಸಿದ್ದಾರೆ' ಎಂದು ದೂರು ನೀಡಿದ್ದಾಳೆ. ಕೋರ್ಟ್ ಏನು ಮಾಡುತ್ತದೆ ಎನ್ನುವುದೀಗ ಕುತೂಹಲಕರ.

ಫಣೀಶ್ ಜೀವನ ಬಾಲಿವುಡ್‌ನ ಸಿನಿಮಾಗೆ ಹೇಳಿ ಮಾಡಿಸಿದ ಕಥೆಯಂತಿದೆ. ಕಲಿಕೆಯಲ್ಲಿ ಭಾರೀ ಬುದ್ಧಿವಂತ. ವೈದ್ಯಕೀಯ ಪದವಿಗೆ ಸೇರಬೇಕಿದ್ದ ಮಗನನ್ನು ತಡೆದ ಅಪ್ಪ, ಐಐಟಿ-ಜೀ ಪರೀಕ್ಷೆಗೆ ಕುಳ್ಳಿರಿಸಿದ. ಅಲ್ಲಿ 132ನೇ ರ್‍ಯಾಂಕ್ ಪಡೆದ. ಆ ಬಳಿಕವೂ ಹಾರ್ವರ್ಡ್ ಯೂನಿವರ್ಸಿಟಿಯಲ್ಲಿ ಮೆಡಿಕಲ್ ಸೀಟು ಸಿಕ್ಕಿತ್ತು. ಆದರೆ ಅಪ್ಪನ ಒತ್ತಾಯಕ್ಕೆ ಸಿಇಟಿ ಬರೆದು ಅಹ್ಮದಾಬಾದ್ ಐಐಎಂಗೆ ಸೇರಿದ. ಪದವಿ ಪಡೆದ ಬಳಿಕ ಸೊನಾಟಾ ಸಾಫ್ಟ್‌ವೇರ್ ಸೇರಿ, ಬಳಿಕ ಪ್ರತಿಷ್ಠಿತ ಟಿಸಿಎಸ್ ಕಂಪೆನಿ ತಂಡ ಕಟ್ಟುವಲ್ಲಿ ಶ್ರಮಿಸಿದ. ಮೊದಲ ದೊಡ್ಡ ಬ್ರೇಕ್ ಸಿಕ್ಕಿದ್ದು ಇನ್‌ಫೋಸಿಸ್‌ನಲ್ಲಿ ನಾರಾಯಣಮೂರ್ತಿಯವರು ಕರೆದು ಕೆಲಸ ಕೊಟ್ಟಾಗ. ಇನ್‌ಫೋಸಿಸ್ ಮಾರಾಟ ವಿಭಾಗಕ್ಕೆ ಮುಖ್ಯಸ್ಥನಾಗಿ ಫಣೀಶ್ ದೊಡ್ಡ ಸಾಧನೆ ಮಾಡಿದ. 1995ರಲ್ಲಿ 20 ಲಕ್ಷ ಡಾಲರ್ ಇದ್ದ



ಇನ್‌ಫೋಸಿಸ್‌ನ ಮಾರುಕಟ್ಟೆ 2002ರಲ್ಲಿ 700 ದಶಲಕ್ಷ ಡಾಲರ್‌ಗೆ ಬೆಳೆಯುವವರೆಗೂ ಫಣೀಶ್ ಅಲ್ಲಿದ್ದ. ಆದರೆ ರೇಖಾ ಮ್ಯಾಕ್ಸಿಮೊನಿಕ್ ಎಂಬ ಉದ್ಯೋಗಿ ಈತನ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಹೊರಿಸಿದ್ದು ದೊಡ್ಡ ಸುದ್ದಿಯಾಯಿತು. ಆಕೆಯ ಜತೆಗೆ ಕೋರ್ಟಿನ ಹೊರಗೆ ಒಪ್ಪಂದ ಮಾಡಿಕೊಂಡ ಇನ್‌ಫೋಸಿಸ್, 30 ಲಕ್ಷ ಡಾಲರ್ ಪರಿಹಾರ ನೀಡಿ, ಫಣೀಶ್‌ನನ್ನು ಕೆಲಸದಿಂದ ಕಿತ್ತು ಹಾಕಿತು.

ಬಳಿಕ ಫಣೀಶ್ ಕ್ವಂಟಾಟ್ ಎಂಬ ಕಂಪೆನಿ ಕಟ್ಟಿದರೂ ಸಫಲವಾಗಲಿಲ್ಲ. ಆದರೆ ಸಿಇಒ ಆಗಿ ಐಗೇಟ್ ಸೇರಿದ ಬಳಿಕ ಫಣೀಶ್ ಹೆಸರು ಮತ್ತೆ ಪ್ರಕಾಶಿಸಿತು. ಕಂಪೆನಿಯ ಬೆಳವಣಿಗೆಗೆ ದೊಡ್ಡ ಕೊಡುಗೆ ನೀಡಿದ ಫಣೀಶ್ ಈಗ ಇತಿಹಾಸ ಮರುಕಳಿಸುವಂತೆ ಮಾಡಿದ್ದಾರೆ. ಕುಡಿಯದ, ಸಿಗರೇಟ್ ಸೇದದ, ಮಾಂಸ ತಿನ್ನದ ಫಣೀಶ್, ಅದಕ್ಕಿಂತಲೂ 'ಅಪಾಯದ ಚಟ'ಕ್ಕೆ ಬಲಿಯಾಗಿದ್ದು ಚೋದ್ಯದ ಸಂಗತಿ. ಐಗೇಟ್ ಕಂಪೆನಿ ಈತನ ವಿರುದ್ಧ 'ಲೈಂಗಿಕ ಕಿರುಕುಳ'ದ ಆರೋಪ ಹೊರಿಸಿಲ್ಲ ಎನ್ನುವುದು ಕುತೂಹಲಕರ. ಮೊಕದ್ದಮೆ ಹೂಡಿರುವ ಅರಾಸೆಲಿ ಈತನಿಂದ ಎಷ್ಟು ಲಕ್ಷ ಡಾಲರ್ ಪರಿಹಾರ ಪಡೆಯಬಹುದು ಎನ್ನುವುದೀಗ ಸಾಫ್ಟ್‌ವೇರ್ ವಲಯದಲ್ಲಿ ಚರ್ಚೆಯ ವಿಷಯ. ●

## ಛಲಗಾತಿ ಅರುಣಿಮಾ

2011 ಏಪ್ರಿಲ್‌ನ ಆ ದಿನ ಅರುಣಿಮಾ ಶರ್ಮಾ ಬದುಕಿಗೆ ದೊಡ್ಡದೊಂದು ತಿರುವು ನೀಡಿತು. ಉತ್ತರ ಪ್ರದೇಶದ ಈ ಪ್ರತಿಭಾವಂತ ವಾಲಿಬಾಲ್ ಆಟಗಾರ್ತಿ ಅದಾಗಲೇ ರಾಷ್ಟ್ರೀಯ ತಂಡದಲ್ಲಿ ಮಿಂಚುತ್ತಿದ್ದಳು. ಅವತ್ತು ಲಖನೌದಿಂದ ರೈಲು ಹತ್ತಿ ಕೋಚಿಂಗ್ ಶಿಬಿರ ಸೇರಲು ದೆಹಲಿಗೆ ಹೊರಟಿದ್ದಳು. ಜನರಲ್ ಬೋಗಿಯಲ್ಲಿ ಕುಳಿತಿದ್ದ ಈಕೆಯ ಬ್ಯಾಗ್ ಮತ್ತು ಚಿನ್ನದ ಸರ ಕಿತ್ತು-ಕೊಳ್ಳಲು ಪುಂಡನೊಬ್ಬ ಕೈಹಾಕಿದ. ಆತನ ಜತೆಗಾರರೂ ಮುಗಿಬಿದ್ದಾಗ ಈಕೆ ಪ್ರತಿಭಟಿಸಿದಳು. ತಳ್ಳಾಟದಲ್ಲಿ ಪುಂಡರು ಈಕೆಯನ್ನು ಚಲಿಸುವ ರೈಲಿನಿಂದ ಹೊರತಳ್ಳಿದರು. ಪಕ್ಕದ ಹಳಿಯಲ್ಲಿ ಬರುತ್ತಿದ್ದ ರೈಲಿಗೆ ಸಿಕ್ಕ ಈಕೆಯ ಕಾಲು ಛಿದ್ರ-ವಾಯಿತು. ಆಸ್ಪತ್ರೆಯಲ್ಲಿ ಎಡಗಾಲು ಕತ್ತರಿಸ-ಲಾಯಿತು. ಈಕೆ ಬದುಕಿ ಉಳಿದದ್ದೇ ಪವಾಡ ಎಂದರು ವೈದ್ಯರು.



ಆಸ್ಪತ್ರೆಯಲ್ಲಿದ್ದಾಗ ಬಂದವರೆಲ್ಲ 'ಛ್ಚು.. ಛ್ಚು' ಎಂದು ಕರುಣೆ ತೋರಿಸಿದ್ದನ್ನು ಅರಣಿಮಾ ಸವಾಲಾಗಿ ಸ್ವೀಕರಿಸಿದಳು. 'ನನಗೆ ಕರುಣೆ ಬೇಕಿಲ್ಲ. ಒಂದು ಕಾಲಿಲ್ಲದಿದ್ದರೂ ಏನನ್ನಾದರೂ ಸಾಧಿಸಿ ತೋರಿಸುತ್ತೇನೆ' ಎಂದು ಹಠ ತೊಟ್ಟಳು. ಆಗ ಪತ್ರಿಕೆಯಲ್ಲಿ ಓದಿದ್ದು ಮಹಿಳೆಯೊಬ್ಬಳು ಮೊತ್ತ ಮೊದಲಿಗೆ ಎವರೆಸ್ಟ್ ಏರಿದ ಸಾಹಸಗಾಥೆ. ಆಕೆಯ ಹೆಸರು ಬಚೇಂದ್ರಿ ಪಾಲ್. ಗುಣವಾದ ಬಳಿಕ ಅರುಣಿಮಾ ನೇರ ಬಚೇಂದ್ರಿ ಪಾಲ್ ಬಳಿಗೇ ತೆರಳಿದಳು. ಕೃತಕ ಕಾಲು ಕಟ್ಟಿಕೊಂಡು, ಟಾಟಾ ಸ್ಟೀಲ್‌ನ ಶಿಬಿರಕ್ಕೆ ಸೇರಿದಳು. ಒಂದೂವರೆ ವರ್ಷದ ಶ್ರಮ ಫಲ ನೀಡಿತು. ಕಳೆದ ವರ್ಷ 6622 ಮೀಟರ್ ಎತ್ತರದ ಚಾಮ್ಸರ್ ಕಾಂಗ್ರಿ ಪರ್ವತ ಏರಿದ್ದ ಅರುಣಿಮಾ, ಕಳೆದ ವಾರ 8848 ಮೀಟರ್ ಎತ್ತರದ ಎವರೆಸ್ಟ್ ಶಿಖರವನ್ನೇರಿ ಹೊಸ ದಾಖಲೆ ಬರೆದಿದ್ದಾಳೆ. 'ಎವರೆಸ್ಟ್ ಏರಲು ಕಾಲಿಗಿಂತಲೂ ಮುಖ್ಯವಾಗಿ ಎದೆಗಾರಿಕೆ ಬೇಕು' ಎನ್ನುವುದು ಈಕೆಯ ಮಾತು. ಈಕೆಗಿನ್ನೂ 25ರ ಹರೆಯ! ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65